(ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಯನ್ನು ಇಂದು ದಿನಾಂಕ:02-06-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

<u>ಮುಂದುವರೆದ ಪಾಟೀಸವಾಲು: ಪ್ರತಿವಾದಿಯರ ಪರ ಶ್ರೀ ಎಸ್ ಜಿ ಕೆ ವಕೀಲರಿಂದ:</u>

1. ನಾನು ಶ್ರೀಮತಿ ಅಜೀತಾರವರ ಬಳಿಯಿಂದ ಜಮೀನು ಖರೀದಿ ಮಾಡಿದ್ದೇನೆ. ಮಾನವಿ ತಾಲೂಕಿನ ಸರ್ವೆ ನಂ.364/1 ಕ್ಷೇತ್ರ 16 ಎಕರೆ 33 ಗುಂಟೆ ಪೈಕಿ 2 ಎಕರೆ ಜಮೀನನ್ನು ಶ್ರೀಮತಿ ಅಜೀತಾರವರ ಜೊತೆ ಖರೀದಿ ಕರಾರು ಒಪ್ಪಂದ ಪತ್ರವನ್ನು ದಿಃ 16-03-2013 ರಂದು ಮಾಡಿಕೊಂಡಿದ್ದೇನೆ ಎಂದರೆ ಸರಿ. ಸದರಿ ಕರಾರು ಪತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು.

2. ಮಾನವಿ ತಾಲೂಕಿನ ಸರ್ವೆ ನಂ.364/1 ಕ್ಷೇತ್ರ 16 ಎಕರೆ 33 ಗುಂಟೆ ಪೈಕಿ 3 ಎಕರೆ 33 ಗುಂಟೆ ಜಮೀನನ್ನು ಶ್ರೀಮತಿ ಅಜೀತಾರವರ ಬಳಿ ನಾನು ಖರೀದಿ ಪತ್ರದ ಮುಖಾಂತರ ದಿಃ 21-05-2013 ರಂದು ಖರೀದಿ ಮಾಡಿದ್ದೇನೆ ಎಂದರೆ ಸರಿ. ಸದರಿ ಕರಾರು ಪತ್ರವನ್ನು ನಿಡಿ-2 ಎಂದು ಗುರುತಿಸಲಾಯಿತು. ಸದರಿ ನಿಡಿ-1 ಮತ್ತು 2 ದಾಖಲೆಗಳಿಗೆ ಕೆ ಸುಧೀರ ತಂದೆ ಕೆ ವಿ ರಾಮಯ್ಯರವರು ಸಾಕ್ಷಿದಾರರಾಗಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಕೆ ಸುಧೀರ ರವರರು ಅಜೀತಾ ಮಾರಾಟಗಾರರ ಪರವಾಗಿ ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಎಂದು ನುಡಿಯುತ್ತಾರೆ.

3. ಕೆ ಸುಧೀರ ರವರು ಈಗ ಮೃತರಾಗಿದ್ದಾರೆ ಎಂದರೆ ಸರಿ. ಕೆ ಸುಧೀರ ರವರ ಹೆಂಡತಿ ಪಶ್ಚಿಮ ಪೋ.ಠಾಣೆ ರಾಯಚೂರು ನಲ್ಲಿ ನನ್ನನ್ನು ಸೇರಿಸಿ ಒಟ್ಟು 7 ಜನರ ವಿರುದ್ದ ದೂರು ದಾಖಲಿಸಿದ್ದಾರೆ ಎಂದರೆ ಸರಿ. ಸಾಕ್ಷಿಯು ಸದರಿ ದೂರು ಸುಳ್ಳು ದೂರು ಎಂದು ನುಡಿಯುತ್ತಾರೆ. . ಸದರಿ ಕೆ ಸುಧೀರ ರವರ ಹೆಂಡತಿ ಪಶ್ಚಿಮ ಪೋ.ಠಾಣೆ ರಾಯಚೂರು ನಲ್ಲಿ ನನ್ನ ವಿರುದ್ದ 15 ಲಕ್ಷ ಸಾಲ ಕೊಟ್ಟ ಕಿರುಕುಳ ಅಂತಾ ದೂರು ದಾಖಲಿಸಿದ್ದಾರೆ ಎಂದರೆ ಸರಿ. ಸಾಕ್ಷಿಯು ಸದರಿ ದೂರು ಸುಳ್ಳು ದೂರು ಎಂದು ನುಡಿಯುತ್ತಾರೆ. ಸದರಿ ದೂರನ್ನು ನಾನು

ವೈಯಕ್ತಿಕವಾಗಿ ನೋಡಿಲ್ಲ. ಸದರಿ ಕ್ರಿಮಿನಲ್ ಪ್ರಕರಣದಲ್ಲಿ ನಾನು ಜಾಮೀನು ಪಡೆದು ವಕೀಲರನ್ನು ನೇಮಕ ಮಾಡಿದ್ದೇನೆ. ಸದರಿ ಕ್ರಿಮಿನಲ್ ಪ್ರಕರಣ ಇನ್ನೂ ಚಾಲ್ತಿಯಲ್ಲಿದೆ. ಸದರಿ ಕೆ ಸುಧೀರರವರು ನನಗೆ ಮೊದಲಿನಿಂದಲೂ ಪರಿಚಯ ಎಂದರೆ ಸರಿಯಲ್ಲ. ಸದರಿ ಕೆ ಸುಧೀರ ರವರರು ಅಜೀತಾ ಮಾರಾಟಗಾರರ ಪರವಾಗಿ ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಿಪಿ-1 ಕರಾರು ಪತ್ರಕ್ಕೂ ಕೂಡಾ ಕೆ ಸುಧೀರರವರೇ ಸಾಕ್ಷಿದಾರರು ಎಂದರೆ ಸರಿ. ಸದರಿ ಕೆ ಸುಧೀರ ರವರರು ಅಜೀತಾ ಮಾರಾಟಗಾರರ ಪರವಾಗಿ ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ-1 ರಿಂದ 3 ದಾಖಲೆಗಳಲ್ಲಿ ಕೆ ಸುಧೀರರವರೇ ಸಾಕ್ಷಿದಾರರು ಎಂದು ಸಹಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕೆ ಸುಧೀರ ರವರರು ಜಮೀನು ಮಾರಾಟ ಮಾಡಿದವರ ಪರವಾಗಿ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಕೆ ಸುಧೀರ ರವರರು ಜಮೀನು ಮಾರಾಟ ಮಾಡಿದವರ ಪರವಾಗಿ ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು